1965ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಾವಳಿಯ ನಿಯಮ 23ಕ್ಕೆ ತಿದ್ದುಪಡಿ ಮಾಡಿ ದಿನಾಂಕ 19.07.2004ರಂದು ಹೊರಡಿಸಲಾದ ಕಾಇ 105 ಎಲ್‌ಇಡಿ 2003ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ ನಿಲುವಳಿ ಸೂಚನೆ ಇದ್ದಾಗ ಇದನ್ನೆಲ್ಲಾ ಮಾಡಬಹುದೇ?

ಅಧ್ಯಕ್ಷರು:– ಇವೆಲ್ಲಾ ಕಾಗದ ಪತ್ರಗಳು

ಶ್ರೀ ಜೆ.ಸಿ. ಮಾಧುಸ್ವಾಮಿ:– ತಾವು ಬೆಳಿಗ್ಗೆಯಿಂದ ರೂಲ್ಸ್‌ಗಳನ್ನು ಇಲ್ಲಿ ಹೇಳುತ್ತಿದ್ದೀರಿ. ಪ್ರಶ್ನೋತ್ತರ ವೇಳೆ ಆದ ತಕ್ಷಣ ತಾವು ನಿಲುವಳಿ ಸೂಚನೆಯ ಪ್ರಸ್ತಾವವನ್ನು ತೆಗೆದುಕೊಳ್ಳಬೇಕು.

5. ಚುನಾವಣಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಯಮಾವಳಿ ನಿಯಮ 18(1)(8)ರ ಪ್ರಕಾರ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಯಮಾವಳಿಯ ನಿಯಮ 18(1)(8)ರ ಪ್ರಕಾರ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನಾ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವುದು".

ಪ್ರಸ್ತಾವವನ್ನು ಮಂಡಿಸಲಾಯಿತು

ಪರದಿಯನ್ನೊಪ್ಪಿಸುವುದು

ಹಕ್ಕುಭಾದ್ಯತಾ ಸಮಿತಿಯ ಮೊದಲನೆಯವರದಿ

ಶ್ರೀ ಎ.ಟಿ. ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ ಅದು ಹೇಗೆ ಆಗುತ್ತದೆ?

ಅಧ್ಯಕ್ಷರು:– ದಯಮಾಡಿ ತಾವು ಕುಳಿತುಕೊಳ್ಳಿ. ಮ್ಯಾಟರ್ ಆಫ್ ಟು ಮಿನಿಟ್ಸ್. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ತಾವು ಯಾವ ರೀತಿ ಮಾಡುತ್ತಿದ್ದೀರೋ ನನ ಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ತಾವು ನಿಲುವಳಿ ಸ ಚನೆ ತೆಗೆದುಕೊಳ್ಳದಿದ್ದರೆ ನಿಯಮಗಳಿಗೆ ಬೆಲೆ ಬರುವುದಿಲ್ಲ.

ಅಧ್ಯಕ್ಷರು:– ಇವತ್ತಿನ ವಿಷಯ ಚರ್ಚೆಗೆ ಇರುವುದು ರಾಜ್ಯಪಾ ರ ಭಾಷಣದ ಮೇಲೆ ವಂದನಾ ಪ್ರಸ್ತಾವ ಅದು ಆದ ಮೇಲೆ ಚರ್ಚೆ ಮಾಡೋಣ.

ಗೊಂದಲ

ಶ್ರೀ ಎ.ಟಿ. ರಾಮಸ್ವಾಮಿ(ಅಧ್ಯಕ್ಷರು ಹಕ್ಕುಭಾದ್ಯತಾ ಸಮಿತಿ):– ಮಾನ್ಯ ಅಧ್ಯಕ್ಷರೆ 2004–05ನೇ ಸಾಲಿನ ವಿಧಾನ ಸಭೆಯ ಹಕ್ಕುಭಾಧ್ಯತಾ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಯಿತು.

7. ಪ್ರಕಟಣೆ

ಅಧ್ಯಕ್ಷರು: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಹನ್ನೆರಡನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಎಸ್.ಎಂ. ಕೃಷ್ಣ ಅವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು ಸದರಿ ರಾಜೀನಾಮೆಯನ್ನು ದಿನಾಂಕ 4ನೇ ಡಿಸೆಂಬರ್ 2004ರಂದು ಅಂಗೀಕರಿಸಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3. ಘಂಟೆವರೆಗೆ ಮುಂದೂಡುತ್ತಿದ್ದೇನೆ

(ಸದನವು 2.10ಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಪುನಃ 3 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

8. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವೇ ಅವಕಾಶ ಕೊಡಿಸಿದಂತೆ..

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಿಲುವಳಿ ಸೂಚನೆ ಇದೆ, ಆ ರೀತಿ ಇದ್ದಾಗ ಬೇರೆ ಬಿಸ್‌ನೆಸ್‌ನ್ನು ತೆಗೆದುಕೊಳ್ಳುವುದು ನಿಯಮಾವಳಿಯ ಪ್ರಕಾರ ಸರಿಯಲ್ಲ. ಅದರ ಬಗ್ಗೆ ಏನು ಮಾಡುವುದು? ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ನಮ್ಮ ಯಡಿಯೂರಪ್ಪನವರು...

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ,....

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಪರವಾಗಿಲ್ಲ, ಸರ್ಕಾರ ಎಂದರೆ ಯಾರೋ ಒಬ್ಬರು ಮಂತ್ರಿಗಳು.

ಶ್ರೀ ವಾಟಾಳ್ ನಾಗರಾಜ್:– ಅದಲ್ಲಾ, ಅಧ್ಯಕ್ಷರೇ ಹೇಳುವುದು ಸಾಕು, ಆ ರೀತಿ ಹೇಳಿದ ಮೇಲೆ ಸರ್ಕಾರ ಹೇಳುವುದೇನಿದೆ? ಅಧ್ಯಕ್ಷರು ಹೇಳಿದ ಮೇಲೆ ಮುಗಿಯಿತಲ್ಲಾ? ನಿಮ್ಮನ್ನು ಸರ್ಕಾರ ಅಲ್ಲವೆಂದು ನಾನು ಹೇಳಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ಆ ರೀತಿ ಹೇಳುವುದಿಲ್ಲ, ಆ ವಿಶ್ವಾಸ ನನಗಿದೆ.

ಶ್ರೀ ವಾಟಾಳ್ ನಾಗರಾಜ್:– ಇಲ್ಲಿ ವಿಶ್ವಾಸದ ಪ್ರಶ್ನೆಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಮಾಧುಸ್ವಾಮಿಯವರು, ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರವರು, ಅರಗಜ್ಞಾನೇಂದ್ರರವರುಗಳೆಲ್ಲಾ ತಮಗೆ ನಿಯಮ 60ರ ಮೇರೆಗೆ ರಾಜ್ಯದಲ್ಲಿ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಪ್ರಶ್ನೆ ವಾಸ್ತವಾಂಶ ಇರತಕ್ಕದ್ದು, ನೀರಿನ ಜಲ ಜಾಸ್ತಿಯಾಗದೆ ಇರುವುದರಿಂದಾಗಿ ಕುಡಿಯುವ ನೀರಿನ ತೊಂದರೆ ಇದೆ. ಇದನ್ನು ನಿಲುವಳಿ